ಶ್ರೀ ಆರ್. ದಯಾನಂದ ಸಾಗರ್.— ಈಗಾಗಲೇ ಅಲ್ಲಿಗೆ ಒಬ್ಬ ಅಧಿಕಾರಿಯನ್ನು ನೇಮಿಸಿ ಏನೇನು ಸೌಕರ್ಯಗಳನ್ನು ಕೊಡಬೇಕೋ ಅದನ್ನೆಲ್ಲ ಕೊಡುತ್ತಿದ್ದೇವೆ.

Sri GANJI VEERAPPA.—May I know whether there is any difficulty for Government to have a farm there ?

Sri R. DAYANANDA SAGAR.—For starting a farm there should be sufficient number of ryots engaged in the industry and also the number of acres under mulberry should be sufficient, so as to justify the existence of the farm. That we will think over when sufficient number of people take up to sericulture.

ಶ್ರೀ ಎ. ಮಸಿಯಪ್ಪ.—ರೇಷ್ಮೆ ವ್ಯವಸಾಯದಲ್ಲಿ ಹುಳು ಮತ್ತು ಗೂಡನ್ನು ಸಾಕತಕ್ಕದ್ದು ಬಹಳ ಸೂಕ್ಷ್ಮವಾಗಿರತಕ್ಕ ಕೆಲಸವಾಗಿರುವುದರಿಂದ ಅನುಭವವಿಲ್ಲದೆ ಇರತಕ್ಕ ರೈತರು ಪ್ರಾರಂಭ ದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಕೂಡಲೇ ಸೊಪ್ಪನ್ನು ಮಾತ್ರ ಬೆಳೆದು ಸರ್ಕಾರಕ್ಕೆ ಕೊಟ್ಟು ಅವರು ರಾಭವನ್ನು ಪಡೆಯತಕ್ಕ ದೃಷ್ಟಿಯಿಂದ ಅವರಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಚಾಕಿ ಸೆಂಟರ್ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಆರ್. ದಯಾನಂದ ಸಾಗರ್.—ಈಗಾಗಲೇ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ. ಆತ ರೈತರಿಗೆ ಏನೇನು ಸೌಕರ್ಯಗಳನ್ನು ನೀಡಬೇಕು, ಸಲಹೆಗಳನ್ನು ಕೊಡಬೇಕು, ಅವೆಲ್ಲವನ್ನೂ ಕೊಡುತ್ತಾರೆ. ಚಾಕಿ ರೇರಿಂಗ್ ಸೆಂಟರ್ ಕೊಡಬೇಕಾದರೆ ಅದಕ್ಕೆ 20 ರಿಂದ 50 ಜನ ರೈತರಾದರೂ ಈ ವ್ಯವಸಾಯವನ್ನು ತೆಗೆದುಕೊಂಡರೆ ಸಾಧ್ಯ ಎಂದು ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರ ಈ ಕೈಗಾರಿಕೆಯನ್ನು ಪ್ರಾರಂಭ ಮಾಡಲು ಯಾವ ಯಾವ ಕಂಡೀಷನ್‌ಗಳನ್ನು ಪೂರೈಸಬೇಕು, ಸ್ವಾಮಿ ?

ಶ್ರೀ ಆರ್. ದಯಾನಂದ ಸಾಗರ್.— ಈಗಾಗಲೇ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಎಷ್ಟು ಎಕರೆಯಲ್ಲಿ ಈ ವ್ಯವಸಾಯವನ್ನು ಮಾಡ ಬಹುದು, ಎಷ್ಟು ಜನ ಇದನ್ನು ತೆಗೆದುಕೊಳ್ಳಬಹುದು ಎಂಬ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡು ತ್ತಿದ್ದಾರೆ. ಇದು ಒಂದು ತಾಂತ್ರಿಕ ಕೆಲಸವಾಗಿ ಇರುವುದರಿಂದ ತಕ್ಷಣ ಇದನ್ನು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ. ಅವರಿಗೆ ತರಬೇತಿ ಕೊಡುವ ವ್ಯವಸ್ಥೆಯೂ ಆಗಬೇಕು. ಇದನ್ನೆಲ್ಲ ಈಗ ಮಾಡು ತ್ತಿದ್ದೇವೆ.

———

Disposal of Gomal Lands in Gauribidanur Taluk,

*Q.—314. Sri R. N. LAKSHMIPATHI (Gauribidanur).—

Will the Government be pleased to state :—

(*a*) the number of villages in Gauribidanur Taluk which have got gomal lands in excess ;

(*b*) the number of villages in which the gomal lands are unauthorisedly cultivated in the said taluk ;

(*c*) what is the policy of Government in disposing of gomal lands for cultivation ?

A.—Sri M. V. KRISHNAPPA (Minister for Revenue).—

(*a*) 35.

(*b*) 115.

(*c*) Excess gomal lands are being disposed of for cultivation under Land Grant Rules now in force

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೆಚ್ಚಾಗಿರುವ ಗೋಮಾಳ ಜಮೀನನ್ನು ವಿಲೇವಾರಿ ಮಾಡುವಾಗ ಪಂಚಾಯಿತಿಯವರ ಅಭಿಪ್ರಾಯವನ್ನು ಕೇಳುತ್ತೀರಾ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಪಂಚಾಯಿತಿಯವರ ಸ್ವಾಧೀನಕ್ಕೆ ಕೊಟ್ಟಿರುವ ಗುಂಡು ತೋಪುಗಳು ಮುಂತಾದವುಗಳ ವಿಷಯದಲ್ಲಿ ಕೇಳುತ್ತೇವೆ. ಬೇರೆ ವಿಷಯದಲ್ಲಿ ಕೇಳುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನೇಕ ಗ್ರಾಮಗಳು ಬೇಚರಾಕ್ ಗ್ರಾಮಗಳಾಗಿರುತ್ತವೆ. ಪಕ್ಕದಲ್ಲಿರುವ ಗ್ರಾಮಗಳಿಗೆ ಗೋಮಾಳವಿಲ್ಲದೆ ಪಕ್ಕದಲ್ಲಿರುವ ಬೇಚರಾಕ್ ಗ್ರಾಮದ ಗೋಮಾಳವನ್ನು ಉಪಯೋಗಿಸುತ್ತಿರುತ್ತಾರೆ. ಆದುದರಿಂದ ಇಂಥ ಜಮೀನನ್ನು ವಿಲೇವಾರಿ ಮಾಡುವಾಗ ಅಕ್ಕಪಕ್ಕದ ಗ್ರಾಮದವರ ಅಭಿಪ್ರಾಯವನ್ನು ತೆಗೆದುಕೊಂಡು ವಿಲೇವಾರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರತಿಯೊಂದು ಜಮೀನನ್ನು ಕೊಡುವಾಗಲೂ ಮಹಜರ್ ಆಗುತ್ತದೆ. ಆ ಮಹಜರನ್ನು ಚಾವಡಿಯಲ್ಲಿ ಮಾಡಬೇಕು ಎಂದು ಇದೆ. ಅದನ್ನೇ ಗ್ರಾಮಸ್ಥರ ಅಭಿಪ್ರಾಯ ಎಂದು ಸಾಮಾನ್ಯವಾಗಿ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಗೋಮಾಳ ಲ್ಯಾಂಡ್ಸ್ ಡಿಸ್ಪೋಸಲ್ ಮಾಡುವುದಕ್ಕೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಮಾಡುತ್ತಿರುವುದು ಹಿಂದಿನ ಕಾಲದ, ಓಬೀರಾಯನ ಕಾಲದ ರೀತಿಯನ್ನು ಅನುಸರಿಸಲಾಗುತ್ತಿದೆ. ಅದನ್ನು ರಿವೈಜ್ ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಗೋಮಾಳ ಲ್ಯಾಂಡ್ ವಿಲೇವಾರಿ ಮಾಡುವಾಗ್ಗೆ ಅದೇ ಗ್ರಾಮದಲ್ಲಿರತಕ್ಕ ಜಮೀನು ಇಲ್ಲದೇ ಇರತಕ್ಕಂಥವರಿಗೆ ಹಾಗೂ ಅಜುಬಾಜು ಗ್ರಾಮದವರಿಗೆ ಕೊಡಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಯಾರಿಗೆ ಮೊದಲು ಕೊಡಬೇಕು ಎಂಬುದನ್ನು ಗೊತ್ತು ಮಾಡಲಾಗಿದೆ. ಒಂದು ವೇಳೆ ಹಾಗೆ ಕೊಡದೇ ಹೋದರೆ ಜನರು ಅಪೀಲು ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಎಕರೆ ಭೂಮಿ ಎಕ್ಸೆಸ್ ಲ್ಯಾಂಡ್ ಇದೆ ಅದೆಲ್ಲ ವನ್ನೂ ವ್ಯವಸಾಯ ಮಾಡಲು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಎಕರೆ ಎಂದು ಹೇಳುವುದಕ್ಕಾಗುವುದಿಲ್ಲ. ಗೋಮಾಳ್ ಲ್ಯಾಂಡ್ ಇದ್ದರೆ ಕೆಲವು ಕಡೆ ಅನ್‌ಅಥರೈಜ್ಡ್ ಕಲ್ಟಿವೇಶನ್ ಮಾಡುತ್ತಾರೆ. ಸಂದರ್ಭಗಳನ್ನು ಪರಿಶೀಲಿಸಿ ಕೊಡುತ್ತೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಗೌರೀಬಿದನೂರು ತಾಲ್ಲೂಕಿನಲ್ಲಿ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಜಮೀನು ಇಲ್ಲದವರಿಗೆ ಜಮೀನು ಕೊಡಬೇಕೆಂದು ಇದ್ದರೂ ಕೂಡ ಹಾಗೆ ಕೊಟ್ಟಿಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಒಂದು ವೇಳೆ ಆಗಿದ್ದರೆ ಡಿ. ಸಿ., ಡಿವಿಜನಲ್ ಕಮಿಷನರ್, ರೆವೆನ್ಯೂ ಟ್ರಿಬ್ಯೂನಲ್, ಹೈಕೋರ್ಟ್ ವರೆಗೆ ಅಪೀಲು ಹೋಗುವುದಕ್ಕೆ ಅವಕಾಶ ಇದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅದೇ ಊರಿನವರಿಗೆ ಪ್ರಿಫರೆನ್ಸ್ ಕೊಡಬೇಕೆಂದು ಇದ್ದರೂ ಕೂಡ ನೂರಕ್ಕೆ ಎಂಬತ್ತರಷ್ಟು ಭಾಗ ಜಮೀನು ಕೊಡುವುದರಲ್ಲಿ ಆ ತರಹ ಮಾಡುವುದು ಕಾಣುತ್ತಿಲ್ಲ. ಇದಕ್ಕೆ ಕಾರಣವೇನು ? ಇದನ್ನು ಸರಿಪಡಿಸಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತರಹ ಮಾಡಿಲ್ಲ.

Grant of lands through Darkhast in Mandya District.

*Q.—341. Sri J. DEVAIAH (Mandya).—

Will the Government be pleased to state:—

(*a*) the total number of persons to whom lands have been granted through darkhast in Mandya Taluk from 1st January 1964 to end of